**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1123/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ.ಹೇಮಂತ್ ಭಟ್ | ಪ್ರಾಸಾ-7 |
| ತಂದೆಯ ಹೆಸರು | : ನಂದಕುಮಾರ್ ಭಟ್ | ಚಾಸಾ-7 |
| ವಯಸ್ಸು | : 53 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅರವಳಿಕೆ ತಜ್ಞರು | ದಿನಾಂಕಃ 10.03.2026. |
| ವಾಸಸ್ಥಳ | : ಸಕಲೇಶಪುರ ಸರ್ಕಾರಿ ಆಸ್ಪತ್ರೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.05.06.2014 ರಿಂದ ದಿ.10.07.2025 ರವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.28.11.2023 ರಂದು ಸ.4.40 ರ ಸಮಯಕ್ಕೆ ಚಾಸಾ-1 ರವರು, ಅದೇ ಮ.3.30 ರ ಸಮಯಕ್ಕೆ ಹಲ್ಲೆಯ ಹಿನ್ನಲೆಯಲ್ಲಿ ಚಾಸಾ-2 ರವರೊಂದಿಗೆ ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಗೆಂದು ಬಂದಿರುತ್ತಾರೆ. ನಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂತು.

1. ಎದೆಯ ಮದ್ಯಭಾಗದಲ್ಲಿ ಊತ ಮತ್ತು ನೋವು

2. ಎಡಗೈ ನ ಮೇಲೆ ಅರ್ಧ ಸೆಂಟೀ ಮೀಟರ್ * ಅರ್ದ ಸೆಂಟಿ ಮೀಟರ್ ನಷ್ಟು ತರಚಿದ ಗಾಯ

ನಂತರ ಮೂಳೆ ತಜ್ಞರ ಪರೀಕ್ಷೆಗಾಗಿ ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲಿಯ ವರದಿಯಂತೆ ಎಡ ಭುಜ ಮತ್ತು ಎದೆ ನೋವು ಇರುವುದು ತಿಳಿದು ಬಂದಿರುತ್ತದೆ. ಸದರಿಯವರು ದಿ.28.11.2023 ರಂದು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ದಿ.29.11.2023 ರಂದು ಬಿಡುಗಡೆ ಹೊಂದಿರುತ್ತಾರೆ. ನನ್ನ ಅಭಿಪ್ರಾಯದ ಪ್ರಕಾರ ಮೇಲಿನ ಎರಡೂ ಗಾಯಗಳೂ ಸಾಮನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಗಾಯದ ವಯಸ್ಸು ನಾನು ಪರೀಕ್ಷಿಸಿದ 6 ತಾಸಿನ ಒಳಗಿರುತ್ತದೆ.

ಅದೇ ದಿನ ಸ.4.55 ರ ಸಮಯಕ್ಕೆ ಚಾಸಾ-2 ರವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡುಬಂತು.

1. ಎದೆಯ ಎಡ ಮತ್ತು ಕೆಳ ಭಾಗದಲ್ಲಿ ಊತ ಮತ್ತು ನೋವು

2. ಬಲ ತೊಡೆಯ ಮೇಲೆ ಊತ ಮತ್ತು ನೋವು

ನಂತರ ಮೂಳೆ ತಜ್ಞರ ಪರೀಕ್ಷೆಗಾಗಿ ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಚಿಕ್ಕಮಗಳೂರಿನ ಹೊರರೋಗಿಯ ಚಿಕಿತ್ಸೆಯ ವರದಿಯ ಪ್ರಕಾರ ಚಾಸಾ-2 ರವರು ನೀಡಿದ ಹೇಳಿಕೆಯ ಮೇರೆಗೆ ಅವರಿಗೆ ಚಿಕಿತ್ಸೆಯನ್ನು ನೀಡಲಾಗಿರುತ್ತದೆ. ವೈದ್ಯರು ಒಳರೋಗಿಯಾಗಿ ದಾಖಲಾಗುವಂತೆ ಸಲಹೆ ನೀಡಿದರು ಚಾಸಾ-2 ರವರು ಆಸ್ಪತ್ರೆಗೆ

ದಾಖಲಾಗದೇ ಹೊರನಡೆದಿರುತ್ತಾರೆ. ನನ್ನ ಅಭಿಪ್ರಾಯದ ಪ್ರಕಾರ ಮೇಲಿನ ಎರಡೂ ಗಾಯಗಳೂ ಸಾಮನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಗಾಯದ ವಯಸ್ಸು ನಾನು ಪರೀಕ್ಷಿಸಿದ 6 ತಾಸಿನ ಒಳಗಿರುತ್ತದೆ.

ಸಾಕ್ಷಿಯು ದಿ.28.12.2023 ರಂದು ನೀಡಿದ ಗಾಯದ ಪ್ರಮಾಣ ಪತ್ರವನ್ನು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.03.02.2024 ರಂದು ನೀಡಿದ ಗಾಯದ ಪ್ರಮಾಣ ಪತ್ರವನ್ನು ನಿಪಿ-9 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಎಂ.ಒ.1 ರಲ್ಲಿ ಹಲ್ಲೆ ಮಾಡಿದ್ದಲ್ಲಿ ಚಾಸಾ-1 ಮತ್ತು 2 ರವರಿಗೆ ಆಗಿರುವಂತಹ ಗಾಯಗಳು ಆಗುವ ಸಂಭವವಿರುತ್ತದೆ.

<u>**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**</u>

ನಿಪಿ-8 ಮತ್ತು 9 ನ್ನು ನೀಡುವಂತೆ ಯಾವ ದಿನ ಮನವಿಯನ್ನು ಮಾಡಿಕೊಳ್ಳಲಾಗಿರುತ್ತದೆ ಎಂದು ನೆನಪಾಗುತ್ತಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಠಾಣೆಗೆ ಮಾಹಿತಿಯನ್ನು ನೀಡುತ್ತೇವೆ ಎಂದರೆ ಸರಿ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ದಿ.28.11.2023 ಸ.5.10 ರ ಸಮಯಕ್ಕೆ ನಮ್ಮ ಆಸ್ಪತ್ರೆಯ ಸಿಬ್ಬಂಧಿಯಿಂದ ಮೂಡಿಗೆರೆ ಪೊಲೀಸ್ ಠಾಣೆಗೆ ಮಾಹಿತಿಯನ್ನು ನೀಡಲಾಗಿರುತ್ತದೆ. ನಂತರದಲ್ಲಿ ಚಾಸಾ-1 ಮತ್ತು 2 ರವರ ಹೇಳಿಕೆಯನ್ನು ಪೋಲಿಸರು ಪಡೆದುಕೊಂಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಪೋಲಿಸರಿಗೆ ಮಾಹಿತಿಯನ್ನು ನೀಡುವ ಸಮಯದಲ್ಲಿ ಚಾಸಾ-1 ಮತ್ತು 2 ರವರು ನಮ್ಮ ಆಸ್ಪತ್ರೆಯಲ್ಲಿಯೇ ಇದ್ದರು. ನಮ್ಮ ಆಸ್ಪತ್ರೆಯಲ್ಲಿ ಗಾಯದ ಅಳತೆಯನ್ನು ತಿಳಿದುಕೊಳ್ಳಲು ಸಾಧನಗಳು ಇರುತ್ತವೆ. ಸದರಿ ವಿಷಯವನ್ನು ನಿಪಿ-8 ಮತ್ತು 9 ರಲ್ಲಿ ನಮೂದಿಸಿರುವುದಿಲ್ಲ. ಚಾಸಾ-1 ಮತ್ತು 2 ರವರು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ. ಚಾಸಾ-1 ಮತ್ತು 2 ರವರಿಗೆ ಆಗಿರುವಂತಹ ಗಾಯಗಳು ಸಾಮಾನ್ಯವಾಗಿ ಒರಟಾದ ಅಥವಾ ಗಟ್ಟಿಯಾದ ವಸ್ತುಗಳ ಮೇಲೆ ಬಿದ್ದಲ್ಲಿ ಆಗುವ ಸಂಭವವಿರುತ್ತದೆ. ಚಾಸಾ-1 ಮತ್ತು 2 ರವರಿಗೆ ಕತ್ತಿಯಿಂದ ಹಲ್ಲೆಯಾಗಿರುವ ಕುರಿತು ಪೋಲಿಸರು ನಮ್ಮ ಮುಂದೆ ಯಾವುದೇ ಕತ್ತಿಯನ್ನು ಹಾಜರುಪಡಿಸಿರುವುದಿಲ್ಲ.

ಚಾಸಾ-1 ಮತ್ತು 2 ರವರಿಗೆ ಸಹಕಾರಿಯಾಗುವಂತೆ ಪೋಲಿಸರೊಟ್ಟಿಗೆ ಶಾಮೀಲಾಗಿ ನಿಪಿ-8 ಮತ್ತು 9 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-8 ಮತ್ತು 9 ನ್ನು ನೀಡುವ ಪೂರ್ವದಲ್ಲಿ ನಾನು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಯಾವುದೇ ಮನವಿಯನ್ನು ನೀಡಿರುವುದಿಲ್ಲ. ಪ್ರಸ್ತುತ ಪ್ರಕರಣಕ್ಕೆ ಸಹಕಾರಿಯಾಗುವಂತೆ ನಾನು ಸುಳ್ಳು ವರದಿಯನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಗಾಯಗಳು ಆಗುತ್ತವೆ ಎಂದರೆ ಇರಬಹುದು.

<u>**ಮರು ವಿಚಾರಣೆ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1123/2024**

| | | |
|---|---|---|
| ಸಾಕ್ಷಿದಾರರ ಹೆಸರು | : ರೇಣುಕಾ ಡಿ.ವಿ | ಪ್ರಾಸಾ-8 |
| ಗಂಡನ ಹೆಸರು | : ಜಗದೀಶ್ ಎಸ್.ಜಿ | ಚಾಸಾ-13 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ 10.03.2026. |
| ವಾಸಸ್ಥಳ | : ಬಣಕಲ್ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ನವೆಂಬರ್ 2023 ರಿಂದ ಜನವರಿ 2024 ರವರೆಗೂ ಮತ್ತು ಜೂನ್ 2024 ರಿಂದ ಇಲ್ಲಿಯವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.29.11.2023 ರಂದು ಚಾಸಾ-12 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿ, ತನಿಖೆಯನ್ನು ಮುಂದುವರೆಸಿ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸ್ಥಳಕ್ಕೆ ಪಂಚರನ್ನಾಗಿ ಚಾಸಾ-5 ಮತ್ತು 6 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ನೋಟೀಸನ್ನು ಜಾರಿ ಮಾಡ, ಸ್ಥಳ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಅದೇ ದಿನ ಕೃತ್ಯ ಸಂಬಂಧಪಟ್ಟಂತೆ ಚಾಸಾ-1 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಯು ಠಾಣೆಗೆ ಹಾಜರಾದ ಮೇರೆಗೆ ಆರೋಪಿಗೆ ಕಲಂ 41 ಎ ರಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ದಿ.29.11.2023 ರಂದು ಮಹಜರ್ ಮುಖೇನ ಅಮಾನತುಪಡಿಸಿಕೊಂಡಿದ್ದ ಕತ್ತಿಯನ್ನು ಠಾಣಾ ಮಾಲು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ದಿ.31.12.2023 ರಂದು ಚಾಸಾ-7 ರವರಿಗೆ ಮನವಿಯನ್ನು ಮಾಡಿಕೊಂಡಿರುತ್ತೇನೆ. ದಿ.02.01.2024 ರಂದು ಚಾಸಾ-12 ರವರು ನೀಡಿದ ಕಲಂ 65 ಬಿ ರಡಿಯ ದೃಢೀಕೃತ ಪ್ರತಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಸಂಬಂಧ ಚಾಸಾ-14 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಮತ್ತು 4 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ದಿ.13.12.2023 ರಂದು ಚಾಸಾ-8 ರವರಿಗೆ ನೀಡಿದ ಮನವಿಯನ್ನು ನಿಪಿ-10 ಮತ್ತು 11, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಮತ್ತು 11(ಎ) ಎಂದು ಗುರುತಿಸಲಾಯಿತು. ಕಲಂ 65 ಬಿ ರಡಿಯ ಪ್ರಮಾಣ ಪತ್ರವನ್ನು ನಿಪಿ-12 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಮತ್ತು ಸಿಡಿಯನ್ನು ನಿಪಿ-13 ಎಂದು ಗುರುತಿಸಲಾಯಿತು. ಚಾಸಾ-2 ರವರು ನಿಪಿ-5 ರಂತೆ, ಚಾಸಾ-4 ರವರು ನಿಪಿ-7 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಎಂ.ಒ.1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ದಿ.29.11.2023 ರಂದು ಚಾಸಾ-12 ರವರಿಂದ ಪ್ರಕರಣದ ಕಡತವನ್ನು ತನಿಖೆಯ ಸಂಬಂಧ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ಸ.4.30 ರ ಸಮಯದಲ್ಲಿ ಸ್ಥಳ ಮಹಜರ್ ಗೆಂದು ಹೊರಟಿರುತ್ತೇವೆ. ಚಾಸಾ-5 ರವರು ಚಾಸಾ-1 ರವರ ಅಕ್ಕ ಎಂದರೆ ಸರಿ. ಚಾಸಾ-5 ರವರು ಸ್ಥಳದಲ್ಲಿಯೇ ಇದ್ದರು. ಚಾಸಾ-6 ರವರು ಆ ದಿನ ಕೃತ್ಯ ನಡೆದ ಸ್ಥಳದಲ್ಲಿಯೇ ಹಾಜರಿಇದ್ದರು. ಸದರಿಯವರು ಆನೆದಿಬ್ಬ ಗ್ರಾಮ, ಗೋಣೀಬೀಡುವಿನ ವಾಸಿಯಾಗಿರುತ್ತಾರೆ. ಚಾಸಾ-3 ರವರು ಅದೇ ವಿಳಾಸದವರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಚಾಸಾ-3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಾನು ಅವರ ಹೇಳಿಕೆಯನ್ನು ಪಡೆಯುವಾಗ ಆನೆದಿಬ್ಬದ ವಾಸಿ ಎಂದು ಹೇಳಿರುತ್ತಾರೆ. ಸ.4.45 ರ ಸಮಯಕ್ಕೆ ಸಾಕ್ಷಿದಾರರುಗಳಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಚಾಸಾ-3 ಮತ್ತು 4 ರವರು ಸ್ಥಳದಲ್ಲಿ ಹಾಜರಿರುವುದಿಲ್ಲ. ಆ ಸಮಯದಲ್ಲಿ ಚಾಸಾ-2 ರವರೂ ಸಹಾ ಇರಲಿಲ್ಲ. ಚಾಸಾ-1 ರವರು ಹಾಜರಿದ್ದರು. ಮಹಜರ್ ಗೆ ಹೋಗುವ ಪೂರ್ವದಲ್ಲಿ ಚಾಸಾ-1 ರವರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಪ್ರಕರಣ ಸಂಭವಿಸಿದ ಸಮಯದಲ್ಲಿ ಚಾಸಾ-1 ರವರು ಪಲ್ಗುಣಿ ಗ್ರಾಮದಲ್ಲಿ ವಾಸವಿದ್ದರು. ಚಾಸಾ-1 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ನಿಪಿ-2 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ಸ್ಥಳದಲ್ಲಿ ಹಾಜರಿ ಇದ್ದ ಸಾಕ್ಷಿದಾರರುಗಳು ನೀಡಿರುತ್ತಾರೆ.

ನಿಪಿ-3 ಮತ್ತು 4 ರಲ್ಲಿ ಯಾವುದೇ ವಿದ್ಯುತ್ ಕಂಬಗಳು ಕಾಣುತ್ತಿಲ್ಲ ಎಂದರೆ ಸರಿ. ಎಂ.ಒ.1 ಆ ದಿನ ಕೃತ್ಯ ನಡೆದ ಸ್ಥಳದ ರಸ್ತೆಯಲ್ಲಿ ಬಿದ್ದಿರುತ್ತದೆ. ಸದರಿ ರಸ್ತೆಯಲ್ಲಿ ವಾಹನ ಸಂಚಾರವು ಹೆಚ್ಚಾಗಿ ಇರುವುದಿಲ್ಲ. ಕತ್ತಿಯನ್ನು ಅಮಾನತುಪಡಿಸಿಕೊಂಡ ಸ್ಥಳದ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಪಂಚಾಯ್ತಿ ರಸ್ತೆ ಇರುತ್ತದೆ. ದಕ್ಷಿಣಕ್ಕೆ ಜಾಣಯ್ಯ ರವರ ಕಾಫೀ ತೋಟ. ನಿಪಿ-3 ಮತ್ತು 4 ರಲ್ಲಿ ಅಂತಹ ಕಾಫೀ ತೋಟ ಕಂಡು ಬರುತ್ತಿಲ್ಲ ಎಂದರೆ ಸರಿ. ನಿಪಿ-3 ಮತ್ತು 4 ನ್ನು ತೆಗೆಯುವಾಗ ಸಮಯವು 5.00 ರಿಂದ 5.30 ಆಗಿರಬಹುದು. ನಿಪಿ-2 ನ್ನು ಚಾಸಾ-12 ರವರು ಬರವಣಿಗೆ ಮಾಡಿರುತ್ತಾರೆ. ನಕಾಶೆಯನ್ನು ಚಾಸಾ-12 ರವರೇ ತಯಾರಿಸಿರುತ್ತಾರೆ. ಸಾಮಾನ್ಯವಾಗಿ ಮಹಜರ್ ಮತ್ತು ನಕಾಶೆಯನ್ನು ಬರೆದ ನಂತರ ಅವರ ಸಹಿಯನ್ನು ಹಾಕುತ್ತಾರೆ ಎಂದರೆ ಸರಿ. ನಿಪಿ-2 ಮತ್ತು ನಕಾಶೆಯಲ್ಲಿ ಬರವಣಿಗೆದಾರರ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ-2 ರ ಮಹಜರ್ ಮತ್ತು ನಕಾಶೆಯನ್ನು ಠಾಣೆಯಲ್ಲಿಯೇ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರ ಮಾಹಿತಿಯನ್ನು ನಾನೇ ಹೇಳಿರುತ್ತೇನೆ. ಸಾಮಾನ್ಯವಾಗಿ ಮಾಹಿತಿಯನ್ನು ನಾನೇ ನೀಡಿದ್ದಲ್ಲಿ ಬಿಕ್ಲಂ ದಾರರ ಸಹಿ ಮಾಡಬೇಕು ಎಂದರೆ ಸಾಕ್ಷಿಯು ನಾನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2 ರ ಮಹಜರ್ ನಲ್ಲಿ ಯಾವುದೇ ಸಹಿ ಇರುವುದಿಲ್ಲ ಕೇವಲ ನಕಾಶೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ನಿಪಿ-2 ರ ಸ್ಥಳ ಎಂಬಲ್ಲಿ ಖಾಲಿ ಬಿಡಲಾಗಿರುತ್ತದೆ ಎಂದರೆ ಮಹಜರ್ ನ ಮೊದಲನೇ ಪುಟದಲ್ಲಿ ಅದನ್ನು ನಮೂದಿಸಿರುವ ಕಾರಣ ಅಲ್ಲಿ ಬರೆಯಲಾಗಿಲ್ಲ ಎಂದು ನುಡಿಯುತ್ತಾರೆ. ಎಂ.ಒ.1 ರಲ್ಲಿ ವಶಪಡಿಸಿಕೊಂಡಾಗ ಯಾವುದೇ ರಕ್ತದ ಕಲೆಗಳು ಇರಲಿಲ್ಲ ಅದೇ ರೀತಿ ಸ್ಥಳದಲ್ಲಿ

ಕಂಡುಬಂದಿರುವುದಿಲ್ಲ. ಚಾಸಾ-2 ರವರು ಕುಲುಮೆ ಕೆಲಸ ಮಾಡುತ್ತಾರೆ ಎಂದರೆ ಸರಿ. ಆದ ಕಾರಣ ಎಂ.ಒ.1 ರಂತಹ ಕತ್ತಿಗಳನ್ನು ಮಾಡುತ್ತಾರೆ ಎಂಬ ಬಗ್ಗೆ ನಾನು ಗಮನಿಸಿರುವುದಿಲ್ಲ. ಚಾಸಾ-2 ರವರು ಮಾಡಿದ ಕತ್ತಿಯನ್ನು ಬಳಸಿಕೊಂಡು ಚಾಸಾ-2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.